# ಕರ್ನಾಟಕ ವಿಧಾನ ಪರಿಷತ್ತು

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಟಿ.ಎನ್.ಜವರಾಯಿಗೌಡ ಇವರ ಶೂನ್ಯ ವೇಳೆಯ ಪ್ರಸ್ತಾಪಕ್ಕೆ ಉತ್ತರ.

ವಿಷಯ: ನೈಸ್ ಸಂಸ್ಥೆಯ ವಿವಾದಿತ ಬಿ.ಎಂ.ಐ.ಸಿ ಯೋಜನೆಯನ್ನು ಸರ್ಕಾರದ ವಶಕ್ಕೆ ಪಡೆಯುವ ಕುರಿತು.

*******

## ಸರ್ಕಾರದ ಉತ್ತರ

ಬಿಎಂಐಸಿ ಯೋಜನೆಯ ಅನುಷ್ಠಾನ ಕುರಿತು ಇದುವರೆಗೂ ಆಗಿರುವ ಪ್ರಗತಿಯ ಹಿನ್ನೆಲೆಯಲ್ಲಿ ಹಾಗೂ ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ದಿನಾಂಕ:16.04.2025ರಂದು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ. ಸರ್ಕಾರವು ನೈಸ್ ಸಂಸ್ಥೆಯ ಜೊತೆ 1997ರಲ್ಲಿ ಮಾಡಿಕೊಂಡ ಮೂಲ ಒಪ್ಪಂದದಂತೆ (ಕ್ರಿಯಾ ಒಪ್ಪಂದ) ಇಲ್ಲದಿದ್ದರೂ ಇಂಟರ್‌ಚೇಂಜ್‌ಗಳಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ಲೇಔಟ್‌ಗಳಿಗೆ ಅನುಮೋದನೆ ನೀಡುವ ಬಗ್ಗೆ, ಆ ಬಡಾವಣೆಗಳಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ನಿವೇಶನ ನೀಡುವ ವಿಧಾನದ ಕುರಿತು, ನೈಸ್ ಕಂಪನಿಗೆ ನೀಡಲಾದ ಒಟ್ಟು ಖಾಸಗಿ ಮತ್ತು ಸರ್ಕಾರಿ ಜಮೀನುಗಳ ಪೈಕಿ ಬಳಸದಿರುವ ಹೆಚ್ಚುವರಿ ಭೂಮಿಯನ್ನು ಸರ್ಕಾರ ಹಿಂಪಡೆಯುವ ಬಗ್ಗೆ, 30 ವರ್ಷಗಳ ಗುತ್ತಿಗೆ ಅವಧಿ ಮುಕ್ತಾಯಗೊಂಡ ನಂತರ ಈ ಯೋಜನೆಯನ್ನು ಸರ್ಕಾರಕ್ಕೆ ಹಿಂದಿರುಗಿಸುವ ಹಾಗೂ ಪ್ರಸ್ತಾಪಿಸಿರುವ ಟೌನ್‌ಶಿಪ್ ಗಳ ಕುರಿತು, ಈ ಯೋಜನೆಯನ್ನು ಕಾನೂನಾತ್ಮಕವಾಗಿ ಸೂಕ್ತ ಬದಲಾವಣೆಯೊಂದಿಗೆ ಮುಕ್ತಾಯಗೊಳಿಸಿ ಸಾವಿರಾರು ಕೋಟಿ ರೂಗಳನ್ನು ಟೋಲ್ ಮುಖಾಂತರ ಸಂಗ್ರಹಿಸುತ್ತಿರುವ ಕುರಿತು, ಯೋಜನೆಯ ಚೌಕಟ್ಟಿನ ಕರಾರಿನ ಅನ್ವಯ 13,237 ಎಕರೆ ಖಾಸಗಿ ಜಮೀನಿನ ಬದಲು ಕೆ.ಐ.ಎ.ಡಿ.ಬಿ. ಒಪ್ಪಂದದಲ್ಲಿ 23,846 ಎಕರೆ ಜಮೀನು ನೀಡಲಾಗಿರುವ ಬಗ್ಗೆ ಮತ್ತು 30 ವರ್ಷ ಮುಗಿಯುತ್ತಾ ಬಂದರೂ ಸಹ ಈ ಯೋಜನೆ ಪೂರ್ಣಗೊಂಡಿಲ್ಲದಿರುವ ಕುರಿತು ಹಾಗೂ ಯೋಜನೆಯನ್ನು ಮುಂದುವರೆಸುವ ಅಥವಾ ಯೋಜನೆಯನ್ನು ಕೈಬಿಡುವ ಬಗ್ಗೆ ಸಚಿವ ಸಂಪುಟ ಉಪ ಸಮಿತಿಯು ಪರಿಶೀಲಿಸಿ ನೀಡುವ ವರದಿಯನ್ವಯ ಸಚಿವ ಸಂಪುಟವು ತೆಗೆದುಕೊಳ್ಳುವ ತೀರ್ಮಾನದಂತೆ ಕ್ರಮಕೈಗೊಳ್ಳಲಾಗುವುದು.

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

ಸಂಖ್ಯೆ:ಲೋಇ 445 ಸಿಆರ್‌ಎಂ 2025